**ಓ.ಎಸ್. ನಂ. 86/2018** **ಪಿ.ಡಬ್ಲ್ಯೂ- 4**

**<u>ಸಾಕ್ಷಿಯನ್ನು ದಿನಾಂಕ 19.6.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಪಾಟೀ ಸವಾಲುಃ 1 ರಿಂದ 3 ಮತ್ತು 7 ನೇ ಪ್ರತಿವಾದಿ ಪರ ಶ್ರೀ ಬಿ.ಎಲ್.ಟಿ ವಕೀಲರಿಂದಃ</u>

ನಾನು ಕಳೆದ 42 ವರ್ಷಗಳಿಂದ ಹಲವಾರು ದಾಖಲೆ ಪತ್ರಗಳನ್ನು ತಯಾರಿಸಿರುತ್ತೇನೆ. ನಾನು ಹೆಚ್.ಡಿ.ಕೋಟೆಯಲ್ಲಿ 2-3 ದಾಖಲಾತಿಗಳನ್ನು ತಯಾರಿಸಿರುತ್ತೇನೆ. ನನಗೆ ವಾದಿಯು ನಿಪಿ1 ಮತ್ತು 2 ರಂತೆ ಕ್ರಯಪತ್ರ ತಯಾರಿಸಿದಾಗ ಪರಿಚಯವಾಗಿರುತ್ತಾರೆ. ಅದಕ್ಕಿಂತ ಪೂರ್ವದಲ್ಲಿ ಅವರ ಪರಿಚಯವಿರಲಿಲ್ಲ. 5 ನೇ ಪ್ರತಿವಾದಿಯು ಹೆಚ್.ಡಿ.ಕೋಟೆಯವರು ಆಗಿರಬಹುದು. ಅವರು ಸಹ ನಿಪಿ1 ಮತ್ತು 2 ರಂತೆ ಕ್ರಯಪತ್ರವಾದಾಗ ಪರಿಚಯವಾಗಿರುತ್ತಾರೆ. ನಿಪಿ2 ರಂತೆ 4 ನೇ ಪ್ರತಿವಾದಿಯ ಹೆಸರಿನಲ್ಲಿ ಕ್ರಯಪತ್ರವಾದಾಗ ನನಗೆ ವಾದಿಯ ಪರಿಚಯವಿರಲಿಲ್ಲ. ನಿಪಿ2 ದಾಖಲೆಗೆ ವಾದಿ ಮತ್ತು ಇನ್ನಿಬ್ಬರು ಸಾಕ್ಷಿದಾರರು ಸಹಿ ಮಾಡಿರುತ್ತಾರೆ. ನನಗೆ ನಿಪಿ2 ದಾಖಲೆಯಾದಾಗ ವಾದಿಯ ಪರಿಚಯವಾಗಿರುತ್ತದೆ ಎಂದರೆ ಸಾಕ್ಷಿದಾರರು ಸದರಿ ದಿನ ನಾನು ಅವರನ್ನು ನೋಡಿರುತ್ತೇನೆ, ಆದರೆ ಪರಿಚಯವಾಗಿರುವುದಿಲ್ಲ ಎನ್ನುವರು. ನಾನು ಯಾವುದೇ ಪತ್ರಕ್ಕೆ ಕನಿಷ್ಟ ಇಬ್ಬರು ಸಾಕ್ಷಿದಾರರ ಸಹಿ ಮಾಡಿಸುತ್ತೇನೆ. ನಿಪಿ2 ದಾಖಲೆಗೆ ಸಾಕ್ಷಿದಾರರಾಗಿ ಸಹಿ ಮಾಡಿಸಲು ವಾದಿಯನ್ನು ಯಾರು ಕರೆದುಕೊಂಡು ಬಂದಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಯಾವುದೇ ಪತ್ರದಲ್ಲಿ ತಿದ್ದುಪಡಿಯಾದರೆ ಪತ್ರದ ಕೊನೆಯಲ್ಲಿ ತಿದ್ದುಪಡಿ ಸಂಖ್ಯೆಯನ್ನು ನಮೂದು ಮಾಡುತ್ತೇನೆ. ನಿಪಿ2 ರಲ್ಲಿ ತಿದ್ದುಪಡಿಯಾಗಿರುವ ಬಗ್ಗೆ ಸಹಿಯನ್ನು ಮಾತ್ರ ಮಾಡಿದ್ದು, ತಿದ್ದುಪಡಿ ಸಂಖ್ಯೆಯನ್ನು ನಮೂದಿಸಿರುವುದಿಲ್ಲ. ಸಾಕ್ಷಿದಾರರು ಮುಂದುವರಿದು ನೋಂದಣಿಯಾಗುವ ದಾಖಲೆಗೆ ತಿದ್ದುಪಡಿ ಸಂಖ್ಯೆಯನ್ನು ನಮೂದು ಮಾಡುವುದಿಲ್ಲ ಎನ್ನುವರು. ನಿಪಿ2 ದಾಖಲೆಗೆ ಸಹಿ ಮಾಡಿದ ಇನ್ನಿಬ್ಬರು ಸಾಕ್ಷಿದಾರರನ್ನು ಯಾರು ಕರೆದುಕೊಂಡು ಬಂದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ2 ರ ಕೊನೆಯ ಪುಟದಲ್ಲಿ ಬರೆದುಕೊಡುವವರು ಮತ್ತು ಬರೆಸಿಕೊಂಡವರು ಎಂದು ತಿದ್ದುಪಡಿ ಮಾಡಲಾಗಿರುತ್ತದೆ ಎಂದರೆ ಸರಿ. ನಿಪಿ2 ರಲ್ಲಿರುವ ಒಕ್ಕಣೆಯನ್ನು ಪಕ್ಷಗಾರರು ನೀಡಿದ ಮಾಹಿತಿಯಂತೆ ತಯಾರಿಸಿರುತ್ತೇನೆ. ನಿಪಿ2 ದಾಖಲೆಯನ್ನು ತಯಾರಿಸಿದಾಗ ಯಾವ ಮೂಲ ದಾಖಲೆಯನ್ನು ನೋಡಿರುತ್ತೀರಿ ಎಂದರೆ ಸಾಕ್ಷಿದಾರರು 4 ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಕ್ರಯಪತ್ರವನ್ನು ನೋಡಿರುವ ನೆನಪಿರುತ್ತದೆ. 4 ನೇ ಪ್ರತಿವಾದಿಯು ಹಿಂದಿ ಮತ್ತು ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. 4 ನೇ ಪ್ರತಿವಾದಿಗೆ ಕನ್ನಡ ಭಾಷೆಯನ್ನು ಮಾತನಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ2 ದಾಖಲೆಯನ್ನು ತಯಾರಿಸಲು ಸ್ಟಾಂಪ್ ಪೇಪರನ್ನು ಯಾರು ಖರೀದಿಸಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ವಾದಿಯು ಮೂಲತಃ ನಂಜನಗೂಡು ತಾಲ್ಲೂಕಿನವರು ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯು ನಿಪಿ2 ದಾಖಲೆ ನೋಂದಣಿಯಾದಾಗ ಪರಿಚಯವಾಗಿರುತ್ತಾರೆ. ನಾನು ಈ ಹಿಂದೆ ನಿಪಿ2 ರಂತೆ ದಾಖಲಾತಿಯನ್ನು ತಯಾರಿಸಿಕೊಟ್ಟಿದ್ದರಿಂದ 5 ನೇ ಪ್ರತಿವಾದಿಯು ನಿಪಿ1 ರಂತೆ ದಾಖಲಾತಿಯನ್ನು ತಯಾರಿಸಲು ವಾದಿಯನ್ನು ನನ್ನ ಬಳಿ ಕರೆದುಕೊಂಡು ಬಂದಿರುತ್ತಾರೆ. ಸಾಮಾನ್ಯವಾಗಿ ಪತ್ರವನ್ನು ತಯಾರಿಸುವ ಪೂರ್ವದಲ್ಲಿ ಆಸ್ತಿಯ ಖಾತೆಯು ಯಾರ ಹೆಸರಿನಲ್ಲಿರುತ್ತದೆ ಎಂದು ನೋಡಿ

ತಯಾರಿಸುತ್ತೇನೆ. ನಿಪಿ1 ದಾಖಲೆಯಾದಾಗ ಅಥವಾ ನಂತರ 5 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಆಸ್ತಿಯ ಖಾತೆ ಇರಲಿಲ್ಲ ಎಂದರೆ ನನಗೆ ನೆನಪಿರುವುದಿಲ್ಲ. ನಿಪಿ1 ದಾಖಲೆಗೆ ಸಾಕ್ಷಿದಾರರನ್ನು ಯಾರು ಕರೆದುಕೊಂಡು ಬಂದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ವಾದಿ ಮತ್ತು 5 ನೇ ಪ್ರತಿವಾದಿಯ ಚಿತಾವಣೆ ಮೇರೆಗೆ ನಿಪಿ1 ದಾಖಲೆಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯು 5 ನೇ ಪ್ರತಿವಾದಿಗೆ ಹಣವನ್ನು ಯಾವ ರೀತಿ ನೀಡಿರುತ್ತಾರೆ ಎಂದು ನನಗೆ ಈಗ ನೆನಪಿರುವುದಿಲ್ಲ. ಸಾಕ್ಷಿದಾರರು ನಿಪಿ1 ದಾಖಲೆಯನ್ನು ನೋಡಿ ನಗದಾಗಿ ಹಣ ನೀಡಿರುತ್ತಾರೆ ಎನ್ನುವರು. ನಿಪಿ1 ದಾಖಲೆಯಾದಾಗ 20 ಸಾವಿರಕ್ಕಿಂತ ಹೆಚ್ಚಿನ ಹಣವನ್ನು ಚೆಕ್ ಮೂಲಕ ನೀಡಬೇಕು ಎಂಬ ನಿಯಮ ಇತ್ತು ಎಂದರೆ ಸರಿಯಲ್ಲ. ನಿಪಿ1 ದಾಖಲೆಯನ್ನು ನಾನು ಮೈಸೂರಿನಲ್ಲಿ ಟೈಪ್ ಮಾಡಿಸಿರುತ್ತೇನೆ. ನಾನು ಮತ್ತು ವಾದಿ ನಿಪಿ1 ದಾಖಲೆಯನ್ನು ಮೈಸೂರಿನಲ್ಲಿ ಟೈಪ್ ಮಾಡಿಸಿಕೊಂಡು ಹೆಚ್.ಡಿ.ಕೋಟೆಗೆ ಬಂದು 5 ನೇ ಪ್ರತಿವಾದಿಯ ಸಹಿಯನ್ನು ನಾಮಕಾವಸ್ತೆಗೆ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ದಾವಆಸ್ತಿಯನ್ನು ಮಾರಾಟ ಮಾಡಲು ಹಕ್ಕು ಮತ್ತು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು 5 ನೇ ಪ್ರತಿವಾದಿ ಸ್ನೇಹಿತರು ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ನಿಪಿ2 ದಾಖಲೆಯಾದಾಗ 5 ನೇ ಪ್ರತಿವಾದಿಯನ್ನು ಒಮ್ಮೆ ಭೇಟಿ ಮಾಡಿರುತ್ತೇನೆ ಹಾಗೂ ವಾದಿಯನ್ನು ನೋಡಿರುತ್ತೇನೆ. ನಿಪಿ1 ದಾಖಲೆಯಾದಾಗ 5 ನೇ ಪ್ರತಿವಾದಿಯ ಪರಿಚಯ ಇತ್ತು, ಅವರೇ ವಾದಿಯನ್ನು ಕರೆದುಕೊಂಡು ಬಂದಿರುತ್ತಾರೆ. ನಾನು, ವಾದಿ ಮತ್ತು 5 ನೇ ಪ್ರತಿವಾದಿ ಸ್ನೇಹಿತರಾಗಿದ್ದು, ನಾವೆಲ್ಲರೂ ಸೇರಿ ನಿಪಿ1 ನ್ನು ಸೃಷ್ಟಿಮಾಡಿರುತ್ತೇವೆ ಎಂದರೆ ಸರಿಯಲ್ಲ.

ಉಳಿದ ಪ್ರತಿವಾದಿಯರ ಪರ ವಕೀಲರು ಗೈರುಹಾಜರಾಗಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.